‘ನನ್ನ ಚಿಕ್ಕಪ್ಪ ಅಂದ್ರೆ ಅಪ್ಪನ ತಮ್ಮ ಮದುವೆಯಾಗೋವರೆಗೆ ನಮ್ಮ ಜೊತೆಗೇ ಇದ್ದರು. ಅಜ್ಜ, ಅಜ್ಜಿ, ಒಬ್ಬರು ಅತ್ತೆ, ನಾವು ಎಲ್ಲ ಒಟ್ಟಿಗೇ ಇದ್ವಿ. ಚಿಕ್ಕಪ್ಪನಿಗೆ ನಾನೆಂದ್ರೆ ಬಹಳ ಇಷ್ಟ. ಅದು ಎಂಥಾ ಮುಗ್ಧತೆ ಅಂದ್ರೆ ಅವನು ನನ್ನನ್ನು ಎತ್ತಿಕೊಂಡು ಮುದ್ದು ಮಾಡೋದನ್ನು, ಕೆನ್ನೆ ಕಚ್ಚೋದನ್ನು ನಾನು ಪ್ರೀತಿ ಅಂದುಕೊಂಡಿದ್ದೆ. ನಮ್ಮನೇಲಿ ಎಲ್ಲರೂ ಹಂಗೇ ಅಂದುಕೊಂಡಿದ್ದರು. ನಮ್ಮನೆಯ ಹೊರಜಗುಲಿಯಲ್ಲಿ ಅಂದರೆ ಪೋರ್ಟಿಕೋ ಥರಾ ಇರುತ್ತಲ್ಲ ಅಲ್ಲಿ. ಒಂದು ತೂಗುಯ್ಯಾಲೆ ಇತ್ತು. ಕೆತ್ತನೆಗಳಿದ್ದ ಮರದ ಹಲಗೆ. ದಪ್ಪ ಸರಪಳಿ. ಅಜ್ಜನಿಗೆ ಅದು ಬಹಳ ಪ್ರೀತಿ. ಅಜ್ಜ ಕೂರದೇ ಇದ್ದಾಗ ನಾನು ಅದ್ರಲ್ಲಿ ಕೂತು ನಿಧಾನಕ್ಕೆ ತೂಗಿಕೊಳ್ಳೋದು. ಆಗ ಒಂದನೇ ಕ್ಲಾಸಿಗೆ ಹೋಗ್ತಿದ್ದೆ. ಒಂದ್ಸಲ ಸಾಯಂಕಾಲ ಚಿಕ್ಕಪ್ಪ ತಾನು ಅದ್ರಲ್ಲಿ ಕೂತು, ತೊಡೆ ಮೇಲೆ ನನ್ನ ಕೂರಿಸಿಕೊಂಡ. ಅಜ್ಜ ಎಲ್ಲೋ ಹೊರಗೆ ಹೋಗಿದ್ದರು. ಅಪ್ಪ ಇನ್ನೂ ಕೆಲಸದಿಂದ ಬಂದಿರಲಿಲ್ಲ. ಅಮ್ಮ, ಅಜ್ಜಿ ಎಲ್ಲ ಒಳಗಿದ್ದರು. ಒಂದೆರಡು ಸಲ ಜೋರಾಗಿ ಜೀಕಿದ.ಇಲ್ಲಿಂದ ಅಲ್ಲಿಗೆ. ಅಲ್ಲಿಂದ ಇಲ್ಲಿಗೆ ಸುಂಯ್ ಅಂತ. ನನಗೆ ಖುಷಿಯಾಯಿತು. ಆಮೇಲೆ ನಿಧಾನಕ್ಕೆ ಎಡಗೈಯನ್ನು ನನ್ನ ಎದೆಮೇಲೆ ತಂದು ಹೀಗೆ ಹಿಡಿದ. ಬಲಗೈಯನ್ನು ನನ್ನ ಫ್ರಾಕಿನೊಳಗೆ ತೂರಿಸಿದ. ನಂಗೆ ಮೊದ್ಲು ಏನು ಮಾಡ್ತಾನಿವ ಗೊತ್ತಾಗಲಿಲ್ಲ. ಹೀಗೆ ತೊಡೆ ಹತ್ತಿರ ಸವರುತ್ತ. ಕೈ ಇನ್ನೊಂಚೂರು ಮೇಲೆ ತಗಂಡು ಹೋಗ್ತಿದ್ದ. ಜೋಕಾಲಿ ನಿಧಾನ ಮಾಡಿದ್ದ. ಅದು ಅವನು ಮುಟ್ಟಬಾರದ ಜಾಗ ಅಂತೇನೋ ಅಸ್ಪಷ್ಟ ಅರಿವು ನನಗೆ. ನಾನು ಅವನ ತೋಳು ಕಚ್ಚಿ, ಧಡಾರನೆ ಇಳಿದು ಓಡಿಬಿಟ್ಟೆ. ಅಮ್ಮನ ಹತ್ತಿರ ಹೇಳೋದಕ್ಕೂ ಭಯ. ಅತ್ತೆ ಹತ್ತಿರ ಓಡಿಹೋದೆ. ‘ಚಿಕ್ಕಪ್ಪ ಹಿಂಗೆ ಕೂರಿಸ್ಕೊಂಡು, ಹಿಂಗೆ ಮುಟ್ಟಿದ. ಅಂವಾ ಯಾಕೆ ನಾ ಉಚ್ಚೆ ಹೊಯ್ಯೋ ಜಾಗ ಮುಟ್ಟತಾನೆ ಅತ್ತೇ’ ಎಂದೆ. ಅವಳು ಅಂ ಅಂದಳು. ಆಮೇಲೆ ನನ್ನ ಹತ್ತಿರ ಎಳಕೊಂಡು, ತಲೆ ಸವರಿದಳು. ಹಿತ್ತಲಲ್ಲಿ ಇದ್ದ ಇನ್ನೊಂದು ಬಚ್ಚಲುಮನೆಗೆ ಕರ್ಕೊಂಡು ಹೋದಳು. ಉಚ್ಚೆ ಮಾಡು ಅಂದ್ಲು. ನಂಗೆ ಗಾಬರಿ. ಹೆದ್ರಿಕೆ. ಕೂತು ಉಚ್ಚೆ ಮಾಡಿದೆ. ಫ್ರಾಕು ಎತ್ತು ಅಂತ್ಹೇಳಿ ನೀರು ಹಾಕಿ ಸೋಪು ಹಚ್ಚಿ ಗಸಗಸನೆ ಉಜ್ಜಿದಳು. ತೊಡೆಯಿಂದ ಕಾಲಿನವರೆಗೆ ಇಳಿದ ತಣ್ಣೀರು. ‘ಅಂವಾ ಮುಟ್ಟಿದ್ದೆಲ್ಲ ಆ ಉಚ್ಚೆ ಜೊತೆ ಹೋಯ್ತು. ಇನ್ನೊಂದ್ಸಲ ಹಂಗೆಲ್ಲ ಕೂರಕ್ಕೆ ಕರೆದ್ರೆ ಹೋಗ್ಬೇಡ’ ಅಂತ್ಹೇಳಿ ಬಚ್ಚಲಲ್ಲಿ ಹರಿದು ಹೋಗ್ತಿದ್ದ ನೀರಿಗೆ ಪೂಪೂ ಅಂತ ಉಗುಳಿದಳು. ‘ನೋಡು, ಅಂವಾ ಮುಟ್ಟಿದ್ದ ಗಲೀಜೆಲ್ಲ ಹೋಯ್ತು’ ಅಂತ ನಕ್ಕಳು. ‘ನೀನೂ ಪೂಪೂ ಅಂತ ಉಗುಳು’ ಅಂತ ನನ್ನ ಹತ್ತಿರವೂ ಉಗುಳಿಸಿದಳು. ನನ್ನ ತೊಡೆ, ಕಾಲನ್ನು ತನ್ನ ಸೀರೆ ಸೆರಗಿನಿಂದ ಒರೆಸಿ, ತಲೆಯನ್ನ ಎದೆಗೊತ್ತಿಕೊಂಡು ಮೂಸಿದ್ಲು. ನಾ ಹಂಗೇ ಅವಳ ಮುಖ ಸವರಿದೆ. ‘ನೀನ್ಯಾಕೆ ಅಳ್ತಿದೀಯ ಅತ್ತೆ’ ‘ಅಯ್ಯೋ. ಇಲ್ಲ ಅಪ್ಪೂ. ನಿನ್ನ ಕಾಲಿಗೆ ನೀರು ಹಾಕ್ತ ಮುಖಕ್ಕೆ ಸಿಡೀತು’ ಅಂತ ನಕ್ಕಳು. ಅದಾದ ನಂತರ ಚಿಕ್ಕಪ್ಪನ ಬಳಿ ನನ್ನೊಬ್ಬಳನ್ನೇ ಅತ್ತೆ ಯಾವತ್ತೂ ಬಿಡಲೇ ಇಲ್ಲ. ಮೋಹನ ಅವತ್ತು ಅದೇನೋ ಹೊಸ ಪ್ರಯೋಗ ಅಂತ ಮುಂದಾದ ನೋಡು.ಆ ಭಂಗಿ ನಂಗೆ ಉಯ್ಯಾಲೆ ಜೀಕ್ತಾ ಚಿಕ್ಕಪ್ಪ ಮಾಡಿದ್ದು ನೆನಪಿಸಿ, ಇನ್ನಿಲ್ಲದ ಹೇವರಿಕೆ ಅನ್ನಿಸಿತು.’



ರಾಜೋ ಮಾತು ನಿಲ್ಲಿಸಿದಳು. ಮೇಗಲೆ, ವಿನುತಾ ಮುಖಮುಖ ನೋಡಿಕೊಂಡರು. ಬಸ್ಸಿನಲ್ಲಿ ಹತ್ತಿರ ನಿಂತು ಹಿಂಬದಿ ಸವರಾಟ. ಜನಜಂಗುಳಿಯಲ್ಲಿ ತೊಡೆ ಸವರಾಟ. ಹಿಂಬದಿಯ ಸೀಟಿನಿಂದ ಮೆತ್ತಗೆ ಚಾಚುವ ಕೈಗಳ ಸವರಾಟ. ಸವರುವವರ ತೆವಲಿಗೆ ಮೂಕವಾಗಿ ಒಡ್ಡಿಕೊಂಡ ಹತ್ತಾರು ನೆನಪುಗಳು ಮೂವರಲ್ಲಿಯೂ.

ರಾಜೋ ಬಚ್ಚಲಿಗೆ ಹೋಗಿ, ಮುಖ ತೊಳೆದು ಬಂದಳು. ‘ಅದು ನೆನಪಾದಾಗ ಅತ್ತೆ ಅವತ್ತು ಮಾಡಿಸಿದ ಹಂಗೆ ಬಚ್ಚಲಿಗೆ ಹೋಗಿ ಸುಸೂ ಮಾಡಿ, ಪೂಪೂ ಮಾಡ್ತೀನಿ’ ಎಂದಳು.

ಈಗ ತುಸು ಸಮಾಧಾನಗೊಂಡಂತೆ ಮಾತು ಮುಂದುವರೆಸಿದಳು.